ದಿನಾಂಕಃ**10-03-2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯ ಪರವಾಗಿ ಮಾನ್ಯ ಶ್ರೀ. MMP ವಕೀಲರಿಂದಃ**

ನಾನು 10 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯವನ್ನು ಮಾಡುತ್ತೇನೆ. ವಾದಿಯವರು ಈ ದಾವೆಯನ್ನು ಪ್ರಕಾಶ್ ರವರು ಹಣ ನೀಡಿಲ್ಲ ಎಂದು ಹೂಡಿದ್ದಾರೆ. ವಾದಿ ಮತ್ತು ನೀವು ಒಂದೇ ಊರಿನವರು ಎಂದರೆ ಸರಿ. ನೀವು ಮತ್ತು ವಾದಿ ಸ್ನೇಹಿತರು ಎಂದರೆ ಸರಿಯಲ್ಲ. ವಾದಿ ಮತ್ತು ನಿಮ್ಮ ಜಮೀನು ಅಕ್ಕ ಪಕ್ಕದಲ್ಲಿ ಇದೆ ಎಂದರೆ ಸರಿಯಲ್ಲ. ವಾದಿಯವರು ವ್ಯವಸಾಯ ಮಾಡುತ್ತಾರೆ ಮತ್ತು ಕೇಬಲ್ ನಡೆಸುತ್ತಾರೆ. ವಾದಿಯವರಿಗೆ 2 ಎಕರೆ ಜಮೀನು ಇದೆ. ವಾದಿಯವರು ಒಬ್ಬರೇ ಮಗ. ವಾದಿಯವರು ಕೇಬಲ್ ನ್ನು ಸುಮಾರು 20-30 ಹಳ್ಳಿಗಳಲ್ಲಿ ನಡೆಸುತ್ತಾರೆ. ವಾದಿ ಮತ್ತು ಇತರೇ 4-5 ಜನರು ಸೇರಿ ಸದರಿ ಕೇಬಲ್ ನ್ನು ನಡೆಸುತ್ತಿದ್ದಾರೆ. ವಾದಿಯವರಿಗೆ ಕೇಬಲ್ ನಿಂದ ಎಷ್ಟು ಆದಾಯ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ವಾದಿಯವರು ಕೇಬಲ್ ನ್ನು ನಡೆಸಲು ಕೊಪ್ಪ ಮತ್ತು ಗೂಳೂರು ನಲ್ಲಿ ಕಚೇರಿಯನ್ನು ಮಾಡಿಕೊಂಡಿದ್ದಾರೆ. ನೀವು ಅವರ ಕಚೇರಿಗೆ ಹೋಗುತ್ತಿರುತ್ತೀರಿ ಎಂದರೆ ಸರಿಯಲ್ಲ. ಪ್ರಕಾಶ್ ರವರಿಗೆ ವಾದಿಯವರು ಹಣ ನೀಡುವ ಮುಂಚಿನ ದಿನ ನನ್ನ ಬಳಿ ಬಂದು ನೀವು ಹೇಳಿದರೆ ಮಾತ್ರ ಹಣ ಕೊಡುತ್ತಾರೆ ಎಂದು ನನ್ನ ಬಳಿ ತಿಳಿಸಿರುತ್ತಾರೆ. ಮೃತ ಪ್ರಕಾಶ್ ರವರು ವ್ಯವಸಾಯ ಮಾಡುತ್ತಾರೆ ಮತ್ತು ಬಾರ್ ನ್ನು ನಡೆಸುತ್ತಿದ್ದರು. ಬೇರೆಯವರ ಹೆಸರಿನಲ್ಲಿರುವ ಬಾರ್ ನ್ನು ಸದರಿ ಪ್ರಕಾಶ್ ರವರು ನಡೆಸುತ್ತಿದ್ದರು. ಸದರಿ ಬಾರ್ ಟಿ. ಸಿದ್ದಯ್ಯ ರವರಿಗೆ ಸೇರಿದೆ. ಸದರಿ ಬಾರ್ ನಲ್ಲಿ ಪ್ರಕಾಶ್ ರವರು ಕ್ಯಾಶಿಯರ್ ಆಗಿದ್ದರು. ಸದರಿ ಪ್ರಕಾಶ್ ರವರಿಗೆ ಎಷ್ಟು ಸಂಬಳ ನೀಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಅದನ್ನು ಪ್ರಕಾಶ್ ರವರಲ್ಲಿ ಕೇಳಿರುವುದಿಲ್ಲ.

ಸದರಿ ಪ್ರಕಾಶ್ ರವರು ಚಿಕ್ಕದೊಡ್ಡಿ ಗ್ರಾಮದವರು. ನಾನು ಕೂಡ ಅದೇ ಊರಿನವನು. ಸದರಿ ಪ್ರಕಾಶ್ ರವರಿಗೆ ಸುಮಾರು 30 ಗುಂಟೆ ಜಮೀನು ಇದೆ. ಅವರ ಅಣ್ಣ ತಮ್ಮಂದಿರು 3 ಜನ. ಅವರ ಮನೆಯ ವ್ಯವಹಾರವನ್ನು ಪ್ರಕಾಶ್ ರವರು ಮಾಡುತ್ತಿದ್ದರು.

ವಾದಿಯವರು ಪ್ರಕಾಶ್ ರವರಿಗೆ ಹಣ ನೀಡುವ ಮುಂದಿನ ದಿನ, ಸದರಿ ಪ್ರಕಾಶ್ ರವರು ನನಗೆ ನಾಳೆ ವಾದಿಯವರು ಹಣ ನೀಡುತ್ತಾರೆ ನೀವು ಬಂದು ಸಾಕ್ಷಿದಾರರಾಗಿ ಸಹಿ ಮಾಡಬೇಕು ಎಂದು ನನ್ನನ್ನು ಕೇಳಿರುತ್ತಾರೆ. ಪತ್ರ ಬರೆಯುವ ದಿನ ವಾದಿಯವರು ನಾನು ಪ್ರಕಾಶ್ ಗೆ ಹಣ ನೀಡುತ್ತಿದ್ದೆನೆ ಎಂದು ನನಗೆ

ತಿಳಿಸಿರುತ್ತಾರೆ. ಮೃತ ಪ್ರಕಾಶ್ ರವರು ನಾನು ವಾದಿಯವರಿಂದ ಹಣ ತೆಗೆದುಕೊಳ್ಳುತ್ತಿದ್ದೇನೆ ಎಂದು ಚಿಕ್ಕದೊಡ್ಡಿ ಸರ್ಕಾಲ್ ಬಳಿ ನನಗೆ ಹೇಳಿರುತ್ತಾರೆ. ಮೃತ ಪ್ರಕಾಶ್ ರವರು ನನ್ನನ್ನು ಪಕ್ಕಕ್ಕೆ ಕರೆದು ನಾನು ವಾದಿಯವರಿಂದ ಹಣ ತೆಗೆದುಕೊಳ್ಳಬೇಕು ನೀವು ವಾದಿಗೆ ಹೇಳಿ ಎಂದು ನನಗೆ ತಿಳಿಸಿರುತ್ತಾರೆ. ಮೃತ ಪ್ರಕಾಶ್ ರವರು ನನ್ನನ್ನು ಕೊಪ್ಪದ ನಾಗರಾಜು ರವರ ಕಚೇರಿಗೆ ಬನ್ನಿ ಎಂದು ನನಗೆ ತಿಳಿಸಿರುತ್ತಾರೆ. ನಾಗರಾಜು ರವರು ಕೊಪ್ಪ ಗ್ರಾಮದಲ್ಲಿ ಪತ್ರ ಬರೆಯುವ ಕಚೇರಿಯನ್ನು ಹೊಂದಿದ್ದಾರೆ. ದಿ 10-12-2014 ರಂದು ಬೆಳಗ್ಗೆ 10.10 ಗಂಟೆಗೆ ನಾನು ನಾಗರಾಜು ರವರ ಕಚೇರಿಗೆ ಹೋಗಿರುತ್ತೇನೆ. ಸದರಿ ಕಚೇರಿಯಲ್ಲಿ ನಾನು, ನಾಗರಾಜು ಮತ್ತು ಕೃಷ್ಣ, ಮಲ್ಲೇಶ್ ರವರು ಇದ್ದೇವು. ನಾವು ಕಚೇರಿಗೆ ಹೋದ ನಂತರ ಮೃತ ಪ್ರಕಾಶ್ ರವರು ಪತ್ರವನ್ನು ಬರೆಸಿರುತ್ತೆವೆ. ನಾನು, ಮೃತ ಪ್ರಕಾಶ್, ಕೃಷ್ಣ ಮತ್ತು ಮಲ್ಲೇಶ್ ರವರು ಪ್ರತ್ಯೇಕವಾಗಿ ನಾಗರಾಜು ರವರ ಕಚೇರಿಗೆ ಹೋಗಿರುತ್ತೆವೆ. ಸದರಿ ನಾಗರಾಜು ರವರ ಕಚೇರಿಗೆ ಪ್ರಕಾಶ್ ರವರು ಹೋಗಿದ್ದರು. ನಾನು ಕಚೇರಿಗೆ ಹೋದಾಗ ನಾಗರಾಜು ಮತ್ತು ಮೃತ ಪ್ರಕಾಶ್ ರವರು ಇದ್ದರು. ನಂತರ ವಾದಿಯವರು ಬಂದಿರುತ್ತಾರೆ. ಸದರಿ ಕಚೇರಿಯಲ್ಲಿ ಹಣದ ಬಗ್ಗೆ ಯಾವುದೇ ಮಾತುಕತೆ ಆಗಿಲ್ಲ ಎಂದರೆ ಸರಿಯಲ್ಲ.

ಮೃತ ಪ್ರಕಾಶ್ ರವರು 2 ಲಕ್ಷ ರೂಗಳಲ್ಲಿ ಸಾಲವನ್ನು ಪಡೆದು ಸದರಿ ಹಣಕ್ಕೆ ಮಾಸಿಕ ಶೇಕಡ 1 ಬಡ್ಡಿ ನೀಡುವಂತೆ ಒಪ್ಪಿಕೊಂಡಿರುತ್ತಾರೆ. ಆ ಕುರಿತು ಪತ್ರ ಬರವಣಿಗೆ ಆಗಿರುತ್ತದೆ. ಸದರಿ ಮಾತುಕತೆ ಸುಮಾರು 30 ನಿಮಿಷಗಳ ಕಾಲ ನಡೆದಿರುತ್ತದೆ. ನಾವು 4 ಜನ ಹೊರತುಪಡಿಸಿ ಸದರಿ ಜಾಗದಲ್ಲಿ ಬೇರೆ ಯಾರು ಇರಲಿಲ್ಲ. ಮೃತ ಪ್ರಕಾಶ್ ರವರು ಸದರಿ ಆನ್ ಡಿಮ್ಯಾಂಡ್ ಪ್ರೋನೋಟ್ ನ್ನು ತಂದಿರುತ್ತಾರೆ. ಸದರಿ ಆನ್ ಡಿಮ್ಯಾಂಡ್ ಪ್ರೋನೋಟ್ ನ್ನು ಪ್ರಕಾಶ್ ರವರು ತಂದು ಬರೆದುಕೊಂಡಿದ್ದರು. ನಂತರ ನಾನು ಸಾಕ್ಷಿದಾರನಾಗಿ ಸಹಿ

ಹಾಕಿರುತ್ತೇನೆ. ನಿಪಿ-1 ಆನ್ ಡಿಮ್ಯಾಂಡ್ ಪ್ರೋನೋಟ್ ನಲ್ಲಿರುವ ಒಕ್ಕಣೆಯನ್ನು ಮೃತ ಪ್ರಕಾಶ್ ರವರು ಹೇಳಿ ಬರೆಸಿರುತ್ತಾರೆ. ಸದರಿ ಆನ್ ಡಿಮ್ಯಾಂಡ್ ಪ್ರೋನೋಟ್ 3 ರೆವಿನ್ಯೂ ಸ್ಟಾಂಪ್ ಗಳನ್ನು ಅಂಟಿಸಿದ್ದಾರೆ. ಸದರಿ ಆನ್ ಡಿಮ್ಯಾಂಡ್ ಪ್ರೋನೋಟ್ ಗೆ ಪ್ರಕಾಶ್ ರವರು ಸಹಿ ಮಾಡಿರುತ್ತಾರೆ. ನಂತರ ಸಾಕ್ಷಿದಾರರಾಗಿ ನಾನು ಮತ್ತು ಮಲ್ಲೇಶ್ ರವರು ಸಹಿ ಮಾಡಿರುತ್ತೆವೆ. ನಾನು ಎರಡು ಕಡೆ ನಿಪಿ-1 ರಲ್ಲಿ ಸಹಿ ಮಾಡಿರುತ್ತೇನೆ. ಸದರಿ ನಾಗರಾಜು ರವರು ಸದರಿ ನಿಪಿ-1 ನ್ನು ಬರೆದು ಬಿಕ್ಲಾಂದಾರನಾಗಿ ಸಹಿ ಮಾಡಿದ್ದಾರೆ.

ಮಲ್ಲೇಶ್ ರವರು ನಿಮ್ಮ ಸ್ನೇಹಿತರು ಎಂದರೆ ಸರಿಯಲ್ಲ. ನೀವು ದಿ 10-12-2014 ರಂದು

ನಾಗರಾಜು ರವರ ಕಚೇರಿಗೆ ಹೋಗಿಲ್ಲ ಮತ್ತು ಯಾವುದೇ ಪತ್ರ ಬರವಣಿಗೆ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ-1 ಆನ್ ಡಿಮ್ಯಾಂಡ್ ಪ್ರೋನೋಟ್ ನಲ್ಲಿರುವ ಸಹಿ ಮೃತ ಪ್ರಕಾಶ್ ರವರಿಗೆ ಸೇರಿಲ್ಲ ಎಂದರೆ ಸರಿಯಲ್ಲ. ನೀವು, ಮಲ್ಲೇಶ್ ಮತ್ತು ಈ ದಾವೆಯ ವಾದಿ, ಮೃತ  ಪ್ರಕಾಶ್ ರವರು ಇದ್ದ ಬಾರ್ ನಲ್ಲಿ ಸೇರುತ್ತಿದ್ದರು ಎಂದರೆ ಸರಿಯಲ್ಲ. ನೀವು 3 ಜನರು ಸದರಿ ಬಾರ್ ಗೆ ಹೂಗಿ ಪ್ರತಿದಿನ ಮದ್ಯಪಾನ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನೀವು 3 ಜನರು ಸೇರಿ ಮದ್ಯಪಾನ ಮಾಡಿ ಬಿಲ್ ನ್ನು ಪಾವತಿ ಮಾಡದೇ ಮೃತ ಪ್ರಕಾಶ್ ರವರಿಗೆ ಸಾಲ ಹೇಳಿ ಬರುತ್ತಿದ್ದಿರಿ ಎಂದರೆ ಸರಿಯಲ್ಲ. ನೀವು  ಬಿಲ್ ನ್ನು ಪಾವತಿ ಮಾಡದೇ  ನಿಮಗೂ ಮತ್ತು ಮೃತ ಪ್ರಕಾಶ್ ರವರಿಗೆ  ಮಾತುಕತೆ ಇರಲಿಲ್ಲ ಎಂದರೆ ಸರಿಯಲ್ಲ. ನೀವು ಬಿಲ್ ನ್ನು ಪಾವತಿ ಮಾಡದೇ ಇರುವ ವಿಚಾರವನ್ನು  ಮೃತ ಪ್ರಕಾಶ್ ರವರು ಊರಿನಲ್ಲಿ ಕೂಡ ತಿಳಿಸಿದ್ದರು ಎಂದರೆ ಸರಿಯಲ್ಲ. ಮೃತ ಪ್ರಕಾಶ್ ರವರು ಊರಿನಲ್ಲಿ ಸದರಿ ವಿಚಾರವನ್ನು ತಿಳಿಸಿದ್ದ ಕಾರಣ ನಿಮಗೂ ಮತ್ತು ಅವರಿಗೂ ಮಾತುಕತೆ ಇರಲಿಲ್ಲ ಎಂದರೆ ಸರಿಯಲ್ಲ. ಈ ವಿಚಾರವಾಗಿ ನೀವು 3 ಜನರು ಮೃತ ಪ್ರಕಾಶ್ ರವರ ಮೇಲೆ ದ್ವೇಷವನ್ನು ಸಾಧಿಸುತ್ತಿದ್ದೀರಿ ಎಂದರೆ ಸರಿಯಲ್ಲ. ಮೃತ ಪ್ರಕಾಶ್ ರವರ ವಿರುದ್ದ ಸೇಡು ತೀರಿಸಿಕೊಳ್ಳಲು ನಿಪಿ-1 ಆನ್ ಡಿಮ್ಯಾಂಡ್ ಪ್ರೋನೋಟ್ ನ್ನು ಸೃಷ್ಟಿಸಿ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳಿದ ರೀತಿಯಲ್ಲಿ ಮೃತ ಪ್ರಾಕಾಶ್ ರವರು ವಾದಿಯವರ ಹೆಸರಿಗೆ ಯಾವುದೇ ಆನ್ ಡಿಮ್ಯಾಂಡ್

ಪ್ರೋನೋಟ್ ನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನೀವು 3 ಜನರು ಸೇರಿ  ಬಾರ್ ಬಿಲ್ ನ್ನು ಪಾವತಿ ಮಾಡದ ಕಾರಣ ಅದನ್ನು ಮೃಶ ಪ್ರಕಾಶ್ ರವರು ಕೇಳಿದ ಕಾರಣ ಅವರ ವಿರುದ್ದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

1 ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ